2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 128/2017</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾ. ಲಿಯೋ ಫ್ರಾನ್ಸಿಸ್ ಟೌರ್ | ಪಿಡಬ್ಲೂ -05 |
| ತಂದೆಯ ಹೆಸರು | - | ಫಾಯಿರ್ ಟೌರ್ | ಸಿಡಬ್ಲೂ -10 |
| ವಯಸ್ಸು | - | 55 ವರ್ಷ | |
| ಉದ್ಯೋಗ | - | ವೈದ್ಯರು, ಫಾದರ್ ಮುಲ್ಲರ್ ಆಸ್ಪತ್ರೆ, ಮಂಗಳೂರು | |
| ವಾಸ ಸ್ಥಳ | - | ಮಂಗಳೂರು | |

ದಿನಾಂಕಃ 11.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಕಳೆದ 25 ವರ್ಷಗಳಿಂದ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಾ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 02.06.2016 ರಂದು ಬೆಳಿಗ್ಗೆ 5.25 ಗಂಟೆ ಸಮಯಕ್ಕೆ ಫ್ರಾಸಾ (ಕಿರಣ್ ಕುಮಾರ್ ಟಿ.) ಎನ್ನುವವರು ಹೆಂಡತಿಯಿಂದ ಹಲ್ಲೆಗೊಳಗಾದ ವರದಿಯೊಂದಿಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು. ನಮ್ಮ ಆಸ್ಪತ್ರೆಗೆ ದಾಖಲಾಗುವ ಮೊದಲು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಅಲ್ಲಿಂದ ಮಂಗಳೂರು ವೆನ್ಲಾಕ್ ಆಸ್ಪತ್ರೆಗೆ ಕಳುಹಿಸಿದ್ದರು. ಮಂಗಳೂರು ವೆನ್ಲಾಕ್ ಆಸ್ಪತ್ರೆಯಲ್ಲಿ ಸ್ಥಳಾವಕಾಶ ಇಲ್ಲದ ಕಾರಣ ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾಗಿರುವುದಾಗಿ ವರದಿ ಮಾಡಿದ್ದರು.

3. ಗಾಯಾಳು ಸಾಮಾನ್ಯ ಸ್ಥಿತಿಯಲ್ಲಿದ್ದು ಮಾತನಾಡುತ್ತಿದ್ದರು. ಗಾಯಾಳುವೇ ಗಾಯಗೊಂಡ ಹಿನ್ನೆಲೆಯನ್ನು ಸ್ವತಃ ವರದಿ ಮಾಡಿದ್ದರು. ನಾನು ಅದೇ ದಿನ ಗಾಯಾಳುವನ್ನು ಪರೀಕ್ಷಿಸಿದ್ದೇನೆ.

4. ಗಾಯಾಳುವಿನ ಹೊಟ್ಟೆಗೆ ಚುಚ್ಚಿದ ಚಾಕು ಬ್ಯಾಂಡೇಜ್ ಸಹಿತ ಇದ್ದ ಸ್ಥಿತಿಯಲ್ಲಿಯೇ ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದರು. ಗಾಯಾಳುವನ್ನು ಸಿಟಿ ಸ್ಕ್ಯಾನ್ ಗೆ ಒಳಪಡಿಸಲಾಗಿತ್ತು. ಗಾಯಾಳುವನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸ ಲಾಯಿತು.

5. ಗಾಯಾಳುವಿಗೆ ಈ ಕೆಳಕಂಡ ಗಾಯಗಳು ಇರುವುದು ಕಂಡುಬಂದಿರುತ್ತದೆ.

a. Stab injury with knife instiu present in right Hyposhondrium, 4 cm above and lateral to the Umbilicus.

b. Tenderness around wound, a small incised wound about 1 x 2 cm just adjacent to stab wond noted.

Other Findings:

Metalic foreign body is noted traversing the anterior abdominal wall (right para unbilical region) and omentum with its tip in the

mesenteric fat. No evidence of collection along th tract. No free fluid in abdomen, No pneumpoertioneum.

6. ಗಾಯಾಳುವು ದಿಃ 02.06.2016 ರಿಂದ 11.06.2016 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು. ಗಾಯಾಳುವಿನ ಹೊಟ್ಟೆಗೆ ಚುಚ್ಚಿದ ಸ್ಥಿತಿಯಲ್ಲಿ ಚಾಕುವನ್ನು ಶಸ್ತ್ರಚಿಕಿತ್ಸೆ ಕಾಲದಲ್ಲಿ ಹೊರತೆಗೆದು ನಮ್ಮ ಆಸ್ಪತ್ರೆಯ ಮೆಡಿಕಲ್ ಸೂಪರಿನ್ ಟೆಂಡೆಂಟ್ ರವರಿಗೆ ನೀಡಲಾಗಿತ್ತು.

7. ಗಾಯಾಳುವಿನ ಹೊಟ್ಟೆಗೆ ಚುಚ್ಚಿದ ಸ್ಥಿತಿಯಲ್ಲಿ ಚಾಕುವನ್ನು ಶಸ್ತ್ರ ಚಿಕಿತ್ಸೆ ಕಾಲಕ್ಕೆ ಹೊರತೆಗೆದಿದ್ದು ಸದರಿ ಚಾಕುವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ವೈದ್ಯರ ಅಭಿಪ್ರಾಯದ ಮೂಲದಾಖಲೆಯು ಕಡತದಲ್ಲಿದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ